**ದಿನಾಂಕಃ 07-08-2025** **OS NO.114/2021(ಡಿ.ಡಬ್ಲು.1)**

**ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆಃ 4ನೇ ಪ್ರತಿವಾದಿ ಪರವಾಗಿ ಶ್ರೀ ಎಸ್.ಜಿ.ಜೆ. ವಕೀಲರಿಂದಃ-</u>**

ನಾನು ನನ್ನ ಮುಖ್ಯ ವಿಚಾರಣೆಯ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಸಂಗತಿಗಳು ಸತ್ಯವಾಗಿದ್ದು, ಅದನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ.

ಈ ದಾವೆಗೆ ಪೂರಕವಾಗಿ ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳಲ್ಲಿರುವ 3 ಪಟ್ಟಾ ಪುಸ್ತಕಗಳನ್ನು ನಿಡಿ-1 ರಿಂದ 3 ಎಂದು, ಅವುಗಳ ಭಾಷಾಂತರಿಸಿದ ಪ್ರತಿಗಳನ್ನು ನಿಡಿ-1(ಎ) ರಿಂದ ನಿಡಿ-1(ಸಿ) ಎಂದು, ಉರ್ದು ಭಾಷೆಯಲ್ಲಿರುವ ದಾನ ಪತ್ರವನ್ನು ನಿಡಿ-4 ಎಂದು, ನಿಡಿ-4 ರ ಭಾಷಾಂತರಿಸಿದ ಪ್ರತಿಯನ್ನು ನಿಡಿ-4(ಎ) ಎಂದು, ಪಾವತಿ ಬಹಿ ಪುಸ್ತಕವನ್ನು ನಿಡಿ-5 ಎಂದು, 22 ರಸೀದಿಗಳನ್ನು ನಿಡಿ-6 ರಿಂದ 27 ಎಂದು, ಜಮೀನು ದಾಖಲಾತಿ ವರದಿ ಪತ್ರವನ್ನು ನಿಡಿ-28 ಎಂದು, ಕಂದಾಯ ಪಾವತಿ ರಸೀದಿ ನಿಡಿ-29 ಎಂದು, ರಸೀದಿ ಪಟ್ಟಾ ಪುಸ್ತಕವನ್ನು ನಿಡಿ-30 ಎಂದು, ಸರ್ವೆ ನಂಬರ 270/* ರ 8 ಪುಟಗಳಲ್ಲಿರುವ ಕೈಬರಹ ಪಹಣಿ ಪತ್ರಿಕೆಗಳು ದೃಢಿಕೃತ ನಕಲುಗಳನ್ನು ನಿಡಿ-31 ಎಂದು, ಸರ್ವೆ ನಂಬರ 270/*/* ರ 22 ಪುಟಗಳಲ್ಲಿರುವ ಪಹಣಿ ಪತ್ರಿಕೆಯನ್ನು ನಿಡಿ-32 ಎಂದು, ಒಂದು ಪ್ರಮಾಣ ಪತ್ರದ ದೃಢಿಕತ ನಕಲನ್ನು ನಿಡಿ-33 ಎಂದು, ನಮೂನೆ ಸಂಖ್ಯೆ 11 ರ ದೃಢಿಕೃತ ನಕಲನ್ನು ನಿಡಿ-34 ಎಂದು ಗುರುತಿಸಲಾಯಿತು.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಹಾಗೂ ನಾನು ಹಾಜರುಪಡಿಸಿದ ದಾಖಲೆಗಳನ್ನು ಪರಿಗಣಿಸಿ ಸದರಿ ದಾವೆಯನ್ನು ಖರ್ಚು ಸಹಿತ ವಜಾ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ..

**<u>ಪಾಟೀ ಸವಾಲುಃ ವಾದಿ ಪರವಾಗಿ ಶ್ರೀ ಬಿ. ಎಸ್. ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**